ಯೋಗೀಶ್ ಆರ್, ಮಾವುಕೆರೆ

*ಅಲೆಗ್ಸಾಂಡರ್‌ನಂತೆ ಭೂಮಿಯನ್ನೇ ಗೆಲ್ಲುವ ಆಸೆ ಇರುವ ನನಗೆ ಒಬ್ಬ ಹುಡುಗಿಯ ಮನಸ್ಸನ್ನೇ ಗೆಲ್ಲಲಾಗುತ್ತಿಲ್ಲವಲ್ಲಾ...?*



ಅಲೆಗ್ಸಾಂಡರ್‌ನಷ್ಟೇ ಆಸೆ ಇರುವ ನಿಮ್ಮನ್ನು ಕಟ್ಟಿಕೊಂಡರೆ ಎರಡು ಸವತಿಯರ ಕಾಟ ಖಚಿತವೆಂದು ಅವಳಿಗೆ ತಿಳಿದಿದೆಯಂತೆ.

ಸುನಂದ ಲೋಕರೆಡ್ಡಿ, ದಾವಣಗೆರೆ

*ಒಬ್ಬ ವ್ಯಕ್ತಿ ಒಳ್ಳೆಯವನಾಗಿ ಕಾಣಲು ಯಾವ ಲೇಬಲ್ ಹಚ್ಚಿಕೊಳ್ಳಬೇಕು?*

ಇತರರು ನೀಡಬಲ್ಲ 'ರಿಲೈಬಲ್' ಎಂಬ ಲೇಬಲ್.

ಉಷಾ ಸೋಗಲ್, ಬೆಂಗಳೂರು

*ನಮಗೂ ಹಕ್ಕಿಗಳಂತೆ ರೆಕ್ಕೆ ಇದ್ದಿದ್ದರೆ?*

'ಫ್ಲೈಯಿಂಗ್ ಕಿಸ್' ಎನ್ನುವುದರ ಅರ್ಥವೇ ಬೇರೆಯಾಗುತ್ತಿತ್ತು.

ರಾಜು ಎಸ್. ಗಾಲಿ, ಅಥಣಿ

*ಸ್ವಚ್ಛತೆಯ ವಿಷಯದಲ್ಲಿ ವಿದೇಶಗಳು ಭಾರತಕ್ಕಿಂತ 150 ವರ್ಷ ಮುಂದಿವೆ ಎನ್ನುತ್ತಾರಲ್ಲಾ....?*




ಸರಿಯೇ. 150 ವರ್ಷಗಳಿಂದ ವಿದೇಶಗಳು ಭಾರತಕ್ಕೆ ತಮ್ಮ ಕಸ ರವಾನೆ ಮಾಡಿರುವುದರ ಫಲವಿದು!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಮಿತ್ರನಿಗೆ ನೀನು ನನ್ನ ಬೆಸ್ಟ್ ಫ್ರೆಂಡ್ ಎಂದು ಹೇಳಬಹುದು. ಆದರೆ ಹೆಂಡತಿಗೆ ನೀನು ನನ್ನ ಬೆಸ್ಟ್ ವೈಫ್ ಎನ್ನಬಾರದಂತೆ. ಏಕೆ?*

ಕೈಕೇಯಿಗೆ ಹಾಗೆ ಹೇಳಿದ್ದರಿಂದ ಮಗ, ರಾಜ್ಯ, ಪ್ರಾಣ ಕಳೆದುಕೊಂಡ ಉದಾಹರಣೆ ಇರುವುದರಿಂದ.

ಮೋಹನರಾಜು ಎಸ್.ಎ., ಶಿವಮೊಗ್ಗ

*ಕಾವೇರಿ ನದಿಪಾತ್ರದ ಜನರಿಗೆ ಮಿತ ಜಲಪಾನ ಮತ್ತು ಅಪರೂಪದ ಸ್ನಾನ ಪದ್ಧತಿ ಜಾರಿಗೆ ತಂದರೆ ಹೇಗೆ?*

ತರಬಹುದು. ಜೊತೆಗೆ ಮೂಗಿಗೆ ಅಡ್ಡಲಾಗಿ ಹಿಡಿದುಕೊಳ್ಳಲು ಕರ್ಚೀಫ್‌ಭಾಗ್ಯ ನೀಡಬೇಕಷ್ಟೆ.

ಕೆ.ಎಂ. ವಿಭೂತಿ, ಹರಿಹರ

*ಶ್ರೀಕೃಷ್ಣ, ರಾಮ, ಲಕ್ಷ್ಮಣರಿಗೆ ಪುರುಷರಿಗೆ ಇರಬೇಕಾದ ಮೀಸೆಯೇ ಇಲ್ಲ. ಆದರೂ ಅವರು ಪುರುಷೋತ್ತಮರು ಹೇಗೆ?*

ಹ್ಞ! ಮೀಸೆಯೇ ಪುರುಷಲಕ್ಷಣವಾದರೆ ಜಿರಳೆಯನ್ನು ಪುರುಷೋತ್ತಮ ಎನ್ನಬೇಕಾದೀತು!

ಪೇಂಟರ್ ಪಾಪು, ಸಂತೇಮರಹಳ್ಳಿ

*ಹಣ ಇಲ್ಲದೆಯೇ ಕರ್ನಾಟಕದಲ್ಲಿ ಬೇಗ ಹೆಸರು ಮಾಡಬೇಕೆಂದರೆ ಏನು ಮಾಡಬೇಕು?*

ಟೌನ್‌ಹಾಲ್ ಮುಂದೆ ನಿಂತು ಹೋಗಿಬರುವವರಿಗೆಲ್ಲ ಮಾಂಸ ಹಂಚಿ.

ಸದ್ದಪಲ್ಲಿ ರಾಮಕೃಷ್ಣಾರೆಡ್ಡಿ, ಬೆಂಗಳೂರು

*ನಿರ್ದೇಶಕರನ್ನು ದೇವರಿಗೆ ಹೋಲಿಸಲು ಕಾರಣವೇನು?*

ಇಬ್ಬರದೂ ಒಂದೇ ವಿಧದ ಕೆಲಸವಾದ್ದರಿಂದ – ಲೈಟ್ಸ್ (ಜನನ); ಆಕ್ಷನ್ (ಜೀವನ) ಕಟ್ (ಮರಣ)!

ಅಲ್ಲಾ ಬಕಷ್, ಮಧುಗಿರಿ

*ನಾಗರಹಾವಿಗೆ ಕಿವಿ ಇಲ್ಲ ಎನ್ನುತ್ತಾರೆ. ಹಾಗಾದರೆ ಹಾವಾಡಿಗನ ಪುಂಗಿ ಕೇಳಿಸುವುದಾದರೂ ಹೇಗೆ?*

ಕೇಳಿಸಬೇಕೇಕೆ? ಗಂಡ ಹೆಂಡತಿಗೆ ತಲೆಯಾಡಿಸುವಂತೆ ಅದೂ ಆಡಿಸುತ್ತದೆ ಅಷ್ಟೆ.

ಕೆ.ಯಂ. ವೀರೇಶ್, ಕೂಡ್ಲಿಗಿ

*ಮನುಷ್ಯ ಏನು ಇಲ್ಲದಿದ್ದರೆ ಸುಖವಾಗಿರುತ್ತಾನೆ?*

ಏನು ಬೇಕೆಂದು ಯೋಚಿಸಲೂ ಬಿಡುವು ಇಲ್ಲದಿದ್ದರೆ.

ಎನ್.ಎಸ್. ಆನಂದ್, ಬೆಂಗಳೂರು

*ಹಣವುಳ್ಳವರು ಇದ್ದಾರೆ; ಗುಣವುಳ್ಳವರು ಇದ್ದಾರೆ. ಸುಖವುಳ್ಳವರು ಎಲ್ಲಿದ್ದಾರೆ?*

ಹಣದಿಂದ ಗುಣವನ್ನು ಅಳೆಯದ ಜಾಗದಲ್ಲಿ.

## ಬಹುಮಾನಿತ ಪ್ರಶ್ನೆ

ದೇವೇಂದ್ರ. ಕಡೂರು

*ಮನಸ್ಸಿಗೆ ನೋವುಂಟು ಮಾಡುವ ಸಂಗತಿಗಳನ್ನು ಬೇಗ ಮರೆಯುವುದು ಒಳ್ಳೆಯದಲ್ಲವೆ?*

ಇರಬಹುದು. ಆದರೆ.. ಮದುವೆಯಾದುದನ್ನು ಮರೆಯಲು ಸಾಧ್ಯವಿಲ್ಲವಲ್ಲ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಬಲು ಮಾತುಗಾರ್ತಿಯಾದ ಇವಳ ಹೆಸರು ಮೌನ ಎಂದಿದೆಯಲ್ಲಾ...?*

ಅದು ಮಗು ನಿದ್ರಿಸುತ್ತಿದ್ದಾಗ ಇಟ್ಟ ಹೆಸರಂತೆ.

ಕೆ. ಚಂದ್ರಶೇಖರ, ಬೆಂಗಳೂರು

*ಬುದ್ಧಿಜೀವಿಗಳೆಂದರೆ ಯಾವುವು? ಅವು ಕಶೇರುಕಗಳೋ, ಅಕಶೇರುಕಗಳೋ? ಎಲ್ಲಿರುತ್ತವೆ? ಏನು ತಿನ್ನುತ್ತವೆ?*

ಅವು ಅಕಶೇರುಕ ಸರೀಸೃಪಗಳು; ಕೆಸರಲ್ಲಿ ಇರುತ್ತವೆ; ಸಮಾಜದ ಹಿತವನ್ನು ತಿನ್ನುತ್ತವೆ.

ಬಿ.ಆರ್. ಸುರೇಶ್, ಶಿವಮೊಗ್ಗ

*ಲಕ್ಷಣವಾಗಿ ತಲೆಕೂದಲು ಬೋಳಿಸಿಕೊಂಡರೂ ತಲೆಕೂದಲು ಮೊದಲಿನಷ್ಟೇ ದಟ್ಟವಾಗಿ ಬೆಳೆಯಲು ಕಾರಣವೇನು?*

ಕೂದಲು ಸಹ ಲೋಭ, ಪಾರ್ಥೇನಿಯಂ ಮತ್ತು ದ್ವೇಷದಂತೆ – ಬೇರು ಬೋಳಿಸದಿದ್ದರೆ ಅಳಿವಿಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಆಮೆಯ ಚಿಪ್ಪಿಗೂ, ಹೆಲ್ಮೆಟ್‌ಗೂ ವ್ಯತ್ಯಾಸವೇನು?*



ಆಮೆ ಪೊಲೀಸ್ ಚೆಕಿಂಗ್ ಇಲ್ಲದ ಜಾಗದಲ್ಲೂ ಚಿಪ್ಪು ಧರಿಸಿರುತ್ತದೆ.

ಎಂ. ಮುನಿಯಪ್ಪ, ನೆಲವಾಗಿಲು

*ಇಡೀ ಭಾರತೀಯರು ಸಂಪೂರ್ಣವಾಗಿ ಸಾಕ್ಷರತೆ ಸಾಧಿಸಲು ಏನು ಮಾಡಬೇಕು?*

ಆನ್‌ಲೈನ್ ಮತ ಹಾಕಿದವರಿಗೆ ಮಾತ್ರ ಲಂಚ ನೀಡಲಾಗುವುದು ಎನ್ನಿ. ಅಕ್ಷರವಲ್ಲದೆ ಕಂಪ್ಯೂಟರನ್ನೂ ಕಲಿಯುತ್ತಾರೆ.

■ ರಾಮ್